
15
ನಿಜ, ಈ ಪವಾಡ ನಮ್ಮ ರಾಜನ ಶೌರ್ಯ, ಪರಾಕ್ರಮ ಹಾಗೂ ವಿವೇಕವನ್ನು ತೋರಿಸಿಕೊಡುತ್ತದೆ.
ಈಗ ನಮ್ಮ ನಗರ ಸ್ವರ್ಗ ದಂತಾಯಿತು. ನಿಜಕ್ಕೂ ನಮ್ಮ ರಾಜ ಅಸಾಮಾನ್ಯ ವ್ಯಕ್ತಿಯೇ ಸರಿ.
16
ಓ ಋಷಿಗಳೆ! ದಯವಿಟ್ಟು ಈ ಹದಿನಾಲ್ಕು ಕೋಟಿ ಚಿನ್ನದ ನಾಣ್ಯಗಳನ್ನು ಸ್ವೀಕರಿಸಿ. ನಿಮ್ಮ ಗುರುಗಳಿಗೆ ಗುರುದಕ್ಷಿಣೆ ನೀಡಿ ಅವರ ಅನುಗ್ರಹಕ್ಕೆ ಪಾತ್ರರಾಗಿ.
ಓ ರಾಜ! ನಿನಗೆ ಒಳ್ಳೆಯದೆಲ್ಲವೂ ಬಂದೊದಗಲಿ! ನಿನ್ನ ಪ್ರಜೆಗಳೆಲ್ಲ ಸುಖ ಸಮೃದ್ಧಿಯಿಂದ ಬಾಳಲಿ. ಭಗವಂತನ ಅನುಗ್ರಹದಿಂದ ಶೀಘ್ರದಲ್ಲೇ ನಿನಗೆ ಪುತ್ರಸಂತತಿಯಾಗುವುದು. ಇನ್ನು ನಾನು ಹೊರಡುತ್ತೇನೆ.
17
ಕೌತ್ಸನು ತನ್ನ ಗುರುವಿನ ಬಳಿಗೆ ಹೋದ ...
ಗುರುದೇವ, ನನ್ನ ಗುರುದಕ್ಷಿಣೆಯನ್ನು ಸ್ವೀಕರಿಸಿ.
ಬಾ ಮಗೂ. ನೀನು ನನ್ನ ಆಣತಿಯನ್ನು ಪಾಲಿಸಿದೆ. ನಿನ್ನ ಗುರುಭಕ್ತಿಯಿಂದಾಗಿಯೇ ಈ ಅದ್ಭುತ ಕಾರ್ಯ ನೆರವೇರಿತು. ನಿನಗೆ ಶುಭವಾಗಲಿ!
ಆಧಾರ : ಕಾಳಿದಾಸನ 'ರಘುವಂಶ' ಕಾವ್ಯ



ಪಾಟ್ನಾ


ಕಾಠ್ಮಂಡು

# ನೇಪಾಳ ಹಾಗೂ ಇತರೆಡೆ ಭೂಕಂಪ ಪರಿಹಾರ ಕಾರ್ಯ

ನೇಪಾಳ ಹಾಗೂ ಉತ್ತರ ಭಾರತದ ಕೆಲವು ಭಾಗಗಳಲ್ಲಿ ಏಪ್ರಿಲ್ 25 ರಂದು ಸಂಭವಿಸಿದ ಭೂಕಂಪದಿಂದ ತೊಂದರೆಗೊಳಗಾದ ಪ್ರದೇಶಗಳಲ್ಲಿ ರಾಮಕೃಷ್ಣ ಮಿಶನ್ ಪ್ರಾಥಮಿಕ ಪರಿಹಾರ ಕಾರ್ಯಗಳನ್ನು ಕೈಗೊಂಡಿದೆ. ಅದರ ವಿವರಗಳು ಹೀಗಿವೆ:

**1. ದಾರ್ಜಿಲಿಂಗ್:** ಇಲ್ಲಿನ ಆಶ್ರಮವು ನೇಪಾಳದ ಸಿಂಧುಲಿ ಜಿಲ್ಲೆಯ ಜನಕಪುರ ಕಣಿವೆಯಲ್ಲಿ ಭೂಕಂಪದಿಂದ ಪೀಡಿತವಾದ 5003 ಕುಟುಂಬಗಳಿಗೆ 50,000 ಕೆ.ಜಿ. ಅಕ್ಕಿ, 5000 ಕೆ.ಜಿ. ಸೋಯಾ ಬೀನ್, 15,000 ಕೆ.ಜಿ. ಬೇಳೆ, 5000 ಪ್ಯಾಕೆಟ್ ಅರಶಿನ ಪುಡಿ, 5000 ಪ್ಯಾಕೆಟ್ ಮಸಾಲೆ ಪದಾರ್ಥಗಳು, 5000 ಕೆ.ಜಿ. ಉಪ್ಪು, 2500 ಕೆ.ಜಿ. ಬಿಸ್ಕತ್ತು, 2500 ಕೆ.ಜಿ. ಭುಜಿಯಾ, 25,000 ಕೆ.ಜಿ. ಅವಲಕ್ಕಿ, 1050 ಕೆ.ಜಿ. ಹಾಲಿನ ಪುಡಿ, 2500 ಕೆ.ಜಿ. ಸಕ್ಕರೆ, 1250 ಕೆ.ಜಿ.ಚಹಾಪುಡಿ, 50,000 ಬೆಂಕಿಪೊಟ್ಟಣ, 10,000 ಬಾರ್‌ಸೋಪು, 20,000 ಸೆಟ್ ಬ್ರಷ್-ಪೇಸ್ಟ್, 60,000 ಮೇಣದ ಬತ್ತಿ, 5000 ಪ್ರಥಮ ಚಿಕಿತ್ಸೆಯ ಪೆಟ್ಟಿಗೆ ಹಾಗೂ 5000 ಟರ್ಪಾ ಲಿನ್‌ಗಳನ್ನು ಹಂಚಿದೆ.

**2. ಕಾಠ್ಮಂಡು:** ಇಲ್ಲಿನ ಮಿಷನ್ ಕೇಂದ್ರವು ಸುತ್ತಮುತ್ತಲ ಪ್ರದೇಶಗಳಲ್ಲಿ ಸಾಮೂಹಿಕ ಅಡುಗೆ ಮನೆಯನ್ನು ನಿರ್ಮಿಸಿ ಕೊಟ್ಟು, 750 ಮಂದಿಗೆ ಅಡುಗೆ ಮಾಡಿದ ಆಹಾರವನ್ನು ವಿತರಿಸಿತು. ಏಪ್ರಿಲ್ 28 ರಂದು ಕಠ್ಮಂಡುವಿನ ಥಾನಕೋಟ್‌ನಲ್ಲಿರುವ ಅರವಿಂದ ಅನಾಥಾಶ್ರಮದ 130 ಮಕ್ಕಳಿಗೆ 100 ಕೆ.ಜಿ. ಅಕ್ಕಿ, 20 ಕೆ.ಜಿ. ಬೇಳೆ, 5 ಕೆ.ಜಿ.ಉಪ್ಪು, 5 ಲೀ.ಎಣ್ಣೆ, 3 ಕೆ.ಜಿ. ಸಕ್ಕರೆ, 3 ಪ್ಯಾಕೆಟ್ ಚಾಕಲೇಟ್ ಹಾಗೂ 30 ಪ್ಯಾಕೆಟ್ ಬಿಸ್ಕತ್ತು ಇವನ್ನು ವಿತರಿಸಿತು. ಏಪ್ರಿಲ್ 29 ರಂದು ಕೇಂದ್ರವು ಇಲ್ಲಿಂದ 20 ಕಿ.ಮೀ. ದೂರದಲ್ಲಿರುವ ಸಕೋ ಎಂಬಲ್ಲಿ 700 ಕೆ.ಜಿ. ಅವಲಕ್ಕಿ, 700 ಕುಡಿಯುವ ನೀರಿನ ಬಾಟಲಿ, 500 ಪ್ಯಾಕೆಟ್ ಬಿಸ್ಕತ್ತು ಇವನ್ನು ವಿತರಿಸಿತು. 40 ಕಿ.ಮೀ.ದೂರದ ಶಂಕರಪುರ ನಗರ ಪಾಲಿಕೆಯಲ್ಲಿ 800 ಕೆ.ಜಿ. ಅವಲಕ್ಕಿ, 500 ನೀರಿನ ಬಾಟಲಿ ಹಾಗೂ 500 ಪ್ಯಾಕೆಟ್ ಬಿಸ್ಕತ್ತನ್ನು ವಿತರಿಸಿತು. ಏಪ್ರಿಲ್ 30 ರಂದು ಭಕ್ತಾಪುರ ಪ್ರದೇಶದ ಲಿವಾಲಿ, ಕಮಲ್ ಬಿನಾಯಕ್ ಹಾಗೂ ಘಾಟೆ ಎಂಬಲ್ಲಿ 700 ಪ್ಯಾಕೆಟ್ ಆಹಾರ (ಅವಲಕ್ಕಿ ಹಾಗೂ ಸಿಹಿತಿಂಡಿ), 500ಬಾಟಲಿ ನೀರು, 500 ಪ್ಯಾಕೆಟ್ ಬಿಸ್ಕತ್ತು ಇವನ್ನು ವಿತರಿಸಿತು. ಇದಲ್ಲದೆ 200 ಪ್ಯಾಕೆಟ್ ಅಕ್ಕಿ (ಪ್ರತಿ ಪ್ಯಾಕೆಟ್‌ಗೆ 2 ಕೆ.ಜಿ.ಯಂತೆ), 100 ಪ್ಯಾಕೆಟ್ ಬೇಳೆ (ಪ್ಯಾಕೆಟ್‌ಗೆ 100 ಗ್ರಾಂ) ಇವನ್ನು ಜಲಾತೋಲ್‌ನಲ್ಲಿರುವ ಮಹೇಶ್ವರಿ ಕ್ರೀಡಾಂಗಣದಲ್ಲಿನ ಪರಿಹಾರ ಕೇಂದ್ರದಲ್ಲಿ ವಿತರಿಸ ಲಾಯಿತು.

ಅತಿಹೆಚ್ಚು ಹಾನಿಗೊಳಗಾದ ಜಿಲ್ಲೆಗಳಲ್ಲಿ ಮಿಷನ್ ವಿಸ್ತೃತವಾದ ಪರಿಶೀಲನೆ ನಡೆಸಿದ ಬಳಿಕ ಭಕ್ತಾಪುರ್, ಧಧಿಂಗ್, ಗೋರ್ಖಾ, ಕಠ್ಮಂಡು, ಕವರೆ, ಲಲಿತ್‌ಪುರ್, ಮಕವಾವನ್‌ಪುರ್, ನುವಾಕೋಟ್, ರಾಮೇಚ್ಛಾಪ್, ಸಿಂಧುಪಲ್‌ಚೋಕ್ ಜಿಲ್ಲೆಗಳಲ್ಲಿನ 66 ಗ್ರಾಮಗಳಲ್ಲಿ 3865 ಕುಟುಂಬಗಳಿಗೆ ಏಪ್ರಿಲ್ 30ರಿಂದ ಮೇ 30ರ ವರೆಗೆ 7900 ಕೆ.ಜಿ. ಅಕ್ಕಿ, 780 ಕೆ.ಜಿ. ಬೇಳೆ, 1108 ಕೆ.ಜಿ. ಆಲೂಗಡ್ಡೆ, 100 ಕೆ.ಜಿ. ಕುಂಬಳಕಾಯಿ, 10 ಕೆ.ಜಿ. ಹಸಿಮೆಣಸಿನಕಾಯಿ, 10 ಕೆ.ಜಿ. ಅರಶಿನ ಪುಡಿ, 495 ಕೆ.ಜಿ. ಉಪ್ಪು, 595 ಲೀ. ಎಣ್ಣೆ, 4000 ಕೆ.ಜಿ. ಅವಲಕ್ಕಿ, 3170 ಪ್ಯಾಕೆಟ್ ಬಿಸ್ಕತ್ತು, 4000 ಕೆ.ಜಿ. ಹಾಲಿನಪುಡಿ, 79 ಕೆ.ಜಿ. ಮಕ್ಕಳ ಆಹಾರ, 497 ಕೆ.ಜಿ. ಸಕ್ಕರೆ, 100 ಕೆ.ಜಿ. ಬೆಲ್ಲ, 3 ಕೆ.ಜಿ. ಚಹಾಪುಡಿ, 2300 ನೀರಿನ ಬಾಟಲಿ, 590 ಓ.ಆರ್.ಎಸ್ .ಪ್ಯಾಕೆಟ್, 1700 ಪಾತ್ರೆ ಗಳ ಸೆಟ್(ಪ್ರತಿ ಸೆಟ್‌ನಲ್ಲಿ 1 ಪ್ಲೇಟು, 1 ಗ್ಲಾಸು, 1 ಕಪ್, 1 ಬೇಯಿಸುವ ಪಾತ್ರೆ , 2ಸೌಟು), 1000 ಬಕೆಟ್, 1000 ಮಗ್, 5000 ಕಂಬಳಿ, 1000 ಚಾಪೆ, 2000 ಸೊಳ್ಳೆಪರದೆ, 3200 ಟರ್ಪಾಲಿನ್, 3000 ಬಟ್ಟೆ ಬರೆ, 500 ಬಟ್ಟೆಸೋಪು, 800 ಸೆಟ್ ಬ್ರಷ್-ಪೇಸ್ಟ್, 800 ಟಾರ್ಚ್, 14 ಸೋಲಾರ್ ದೀಪ ಇತ್ಯಾದಿಗಳನ್ನು ಹಂಚಲಾಯಿತು.

**3.ಲಕ್ನೋ:** ಇಲ್ಲಿನ ಮಿಷನ್ ಕೇಂದ್ರವು ನೇಪಾಳದ ಗೋರ್ಖಾ ಮತ್ತು ದಂಗ್ ಜಿಲ್ಲೆಗಳಲ್ಲಿ ಹಾಗೂ ಭಾರತದ ಬಲರಾಮಪುರ ಜಿಲ್ಲೆಯಲ್ಲಿ ಮೇ 1 ರಿಂದು 24ರ ವರೆಗೆ 500 ಕೆ.ಜಿ. ಅವಲಕ್ಕಿ, 150 ಕೆ.ಜಿ. ಹಾಲಿನ ಪುಡಿ, 150 ಕೆ.ಜಿ. ಸಕ್ಕರೆ, 3000 ಕಂಬಳಿ, 1200 ಟರ್ಪಾಲಿನ್, 600 ಮೇಣದ ಬತ್ತಿ, 600 ಬೆಂಕಿಪೊಟ್ಟಣ ಇವನ್ನು ಹಂಚಿದೆ. ನೇಪಾಳದ ಗೋರ್ಖಾ ಜಿಲ್ಲೆಯ 15 ಗ್ರಾಮಗಳಲ್ಲಿ ಭೂಕಂಪದಿಂದ ಪೀಡಿತರಾದ 3417 ಮಂದಿ ರೋಗಿಗಳಿಗೆ ವೈದ್ಯಕೀಯ ನೆರವನ್ನೂ ಈ ಕೇಂದ್ರ ಒದಗಿಸಿದೆ.

**4. ಪಾಟ್ನಾ : ಮುಝಫರ್‌ಪುರ್** ಆಶ್ರಮದೊಂದಿಗೆ ಈ ಆಶ್ರಮವು ಬಿಹಾರದ ರಕ್ಸಾಲ್‌ನಲ್ಲಿ ಒಂದು ಶಿಬಿರವನ್ನು ಆರಂಭಿಸಿ, ಗಡಿ ಪ್ರದೇಶ ಗಳಲ್ಲಿ ಆಶ್ರಯ ಪಡೆದ 1200 ಕುಟುಂಬಗಳಿಗೆ ಮೇ 1 ಹಾಗೂ 2 ರಂದು 1000 ಕೇಕ್, 1000 ಪ್ಯಾಕೆಟ್ ರಸ್ಕ್, 1000 ಪ್ಯಾಕೆಟ್ ಬಿಸ್ಕತ್ತು ಹಾಗೂ